

ಅವನು ಗುಟ್ಕಾ ಜಗಿಯುತ್ತಾ ರಾಹುಲ್ ಮಾತಿಗೆ ತಕ್ಷಣ ಮೆಚ್ಚುಗೆ ಸೂಚಿಸುತ್ತಿದ್ದ. ಇದಷ್ಟೇ ಅವನ ಕೆಲಸ. ಉಳಿದಂತೆ ಇವನಿಂದ ನಮಗೆ ಫೋಟೊ ಪಯಣದಲ್ಲಿ ಯಾವ ಪ್ರಯೋಜನವೂ ಇರಲಿಲ್ಲ. ಬದಲಿಗೆ ಅವನ ಭಟ್ಟಂಗಿತನಕ್ಕೆ ನಾವೇ ಪಗಾರವನ್ನೂ ಕೊಡಬೇಕಿತ್ತು. ಹೆಸರಿಗೆ ನ್ಯಾಚುರಲಿಸ್ಟ್ ಎಂದು ಪಟ್ಟ ಕಟ್ಟಿದ್ದ. ಆ ಸುಡುಗಾಡು ಮನುಷ್ಯನಿಗೆ ಏನೇನೂ ಗೊತ್ತಿರಲಿಲ್ಲ. ಅವನಿಂದ ನಮಗಾದ ಕಿರುಕುಳ ಅಷ್ಟಿಷ್ಟಲ್ಲ. ನಾವು ಪ್ರಾಣಿ- ಪಕ್ಷಿಗಳ ವೀಡಿಯೋ ಮಾಡುವಾಗ ಆತ ತನ್ನ ಮೊಬೈಲಿನಲ್ಲಿ ಅರಚಿಕೊಂಡು ಮಾತಾಡುತ್ತಿದ್ದ. ಇದರಿಂದ ಪ್ರಾಣಿ- ಪಕ್ಷಿಗಳ ದನಿ ಚಿತ್ರೀಕರಿಸುವಲ್ಲಿ ಕಷ್ಟವಾಗುತ್ತಿತ್ತು. ಫೋಟೊಗ್ರಫಿಯಲ್ಲಿ ಮೌನವೇ ಮುಖ್ಯ. ಒಂದು ಸಣ್ಣ ಅಪಶಬ್ದವೂ ಸಿಗಬಹುದಾದ ಒಂದೊಳ್ಳೆ ಚಿತ್ರದ ಸಂದರ್ಭವನ್ನು ಹಾಳುಗೆಡುವುತ್ತದೆ. ಸನ್ನೆ ಸೂಕ್ಷ್ಮವಿಲ್ಲದ, ಫೋಟೊಗ್ರಫಿಯ ಗಂಧಗಾಳಿಯೂ ಅರಿಯದ ಇಂತಹ ಲಫಂಗರ ಜೊತೆ ಬಂದಿದ್ದು ನಮ್ಮದೇ ತಪ್ಪಾಗಿತ್ತು.

ಹಿಂದೆ ಮುಂದೆ ವಿಚಾರಿಸದೆ ಓಡೋಡಿ ಹೋಗಿ ಸಿಕ್ಕಿಬೀಳುವ ಪಟಗಾರರಿಗೆ ಸುಲಿದು ತಿನ್ನುವ ಇಂತಹ ಅರೆಬೆಂದ ನಡುವರ್ತಿ ಜನ ಭಾರತದ ಅನೇಕ ಕಡೆ ಇದ್ದಾರೆ. ಅವರಿಗೆ ನಮ್ಮ ಪಕ್ಷಿ ಪ್ರೀತಿಯೇ ಒಂದು ಬಂಡವಾಳ. ನಮ್ಮ ಉತ್ಸಾಹ ಎಂಬ ದೌರ್ಬಲ್ಯವನ್ನು ಅವರು ಸುಲಿದು ಮುಕ್ಕಲು ಬಳಸಿಕೊಳ್ಳುತ್ತಾರೆ. ದೊಡ್ಡ ದೊಡ್ಡ ಕ್ಯಾಮೆರಾ ಹೊತ್ತು ಬರುವ ನಾವೆಲ್ಲಾ ಮಹಾ ಶ್ರೀಮಂತರು ಎಂಬುದು ಅವರ ತಪ್ಪು ತಿಳಿವಳಿಕೆ. ಲಕ್ಷಾಂತರ ರೊಕ್ಕ ಕ್ಯಾಮೆರಾ ಮೇಲೆ ಸುರಿದಿರುವ ಇವರನ್ನು ಸಾಧ್ಯವಾದಷ್ಟು ಎರಿದು ಕಳಿಸಬೇಕು ಎಂಬ ಹಿಕ್ಮತ್ತು ಅವರು ರೂಪಿಸಿಕೊಂಡಿರುತ್ತಾರೆ. ಹಾಗಂತ ಎಲ್ಲಾ ಪಕ್ಷಿ ತೋರುಗರು ಹೀಗೆಯೇ ದಗಲ್ಬಾಜಿಗಳಾಗಿಯೇ ಇರುತ್ತಾರೆ ಎಂದೇನಿಲ್ಲ. ಫೋಟೊಗ್ರಫಿ ಟೂರ್ ಆಪರೇಟರ್‌ಗಳಲ್ಲಿ ಪ್ರಾಮಾಣಿಕರೂ, ಸ್ನೇಹಪರರು ಇದ್ದಾರೆ. ಚಿತ್ರ ಸೆಳೆಯುವ ಮಂದಿ ನಮ್ಮಲ್ಲಿ ಮತ್ತೆ ಬರಲಿ ಎಂಬ ವೃತ್ತಿಪರ ಕಾಳಜಿಯ ಸಭ್ಯತೆ ಇರುವುದನ್ನು ಅನೇಕರಲ್ಲಿ ಕಂಡಿದ್ದಿದೆ.

ಆದರೆ ಈ ಸಲ ನಮ್ಮ ನಸೀಬುಗೆಟ್ಟು ರಾಹುಲ್ ಕಾಳೆ ಎಂಬ ಎಡವಟ್ಟು ಆಸಾಮಿ ಸಿಕ್ಕಿದ್ದ. ನಾ ಕಂಡ ಅತಿಧೂರ್ತ ಮನುಷ್ಯ ಇವನೊಬ್ಬನೇ. ನಮ್ಮ ಫೊಟೋಗ್ರಫಿ ಚಟವನ್ನು ಶಾಶ್ವತವಾಗಿ ಕೈ ಬಿಡಿಸಲು ಇಂತಹ ನಾಲ್ಕು ಜನ ಸಿಕ್ಕರೆ ಸಾಕು! ಅದೇ ನೋಡಿ ಇವನ ತಮ್ಮ ನಗುಮೊಗದ ಅಮೂಲ್ ಕಾಳೆ ಎಂಬ ಹುಡುಗ ನಮ್ಮ ಮನಸ್ಸಲ್ಲಿ ಉಳಿದು ಹೋದ